**ಅರಣ್ಯ ಇಲಾಖೆಯ ಭೂ ಒತ್ತುವರಿ**

156 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕುಣಿಗಲ್ ತಾಲ್ಲೂಕು ರಂಗಸ್ವಾಮಿ ಗುಡ್ಡದಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಒಟ್ಟು ಪ್ರದೇಶ ಎಷ್ಟು?*

*ಆ) ಈ ಪ್ರದೇಶದಲ್ಲಿ ಯಾರಾದರೂ ಅಕ್ರಮವಾಗಿ ಒತ್ತುವರಿ ಮಾಡಿರುವರೆ, ಹಾಗಿದ್ದಲ್ಲಿ ಅಂತಹವರ ಮೇಲೆ ಜರುಗಿಸಲಾದ ಕ್ರಮವೇನು;*

*ಇ) ಈ ಒಂದು ಪ್ರದೇಶದಲ್ಲಿ ಅರಣ್ಯ ಸಮೃದ್ಧಿಗೆ ಇಲಾಖೆಯ ಕಾರ್ಯಕ್ರಮಗಳೇನು?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 890 ಹೆಕ್ಟೇರ್.

ಆ) 1978ಕ್ಕೂ ಮುಂಚಿನಿಂದ ಸುಮಾರು 40 ಮಂದಿ 26.040 ಏಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ 40 ಜನರನ್ನು ಅರಣ್ಯ ಪ್ರದೇಶದಿಂದ ಉಚ್ಚಾಟನೆ ಮಾಡಲು ಪ್ರಥುತ್ನಗಳು ವಿಫಲವಾಗಿ ಕೆಲವು ಸಲ ಸಿಬ್ಬಂದಿಯವರ ಮೇಲೆ ಅಕ್ರಮಣ ಮಾಡುವೆ ಪ್ರಯತ್ನ ನಡೆದಿರುತ್ತದೆ. ಆದ್ದರಿಂದ ಇವರನ್ನು ಈ ಪ್ರದೇಶದಿಂದ ಹೊರಹಾಕಲು ಸಾಧ್ಯವಾಗಿಲ್ಲ.

ಇ) ಈ ಅರಣ್ಯ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಕಾರ್ಯಕ್ರಮ ಕೈಗೊಂಡಿದ್ದು ಅವುಗಳ ವಿವರ ಈ ಕೆಳಕಂಡಂತಿದೆ.

| | | |
|---|---|---|
| 1990-91 | - | 25 ಹೆಕ್ಟೇರ್ |
| 1991-92 | - | 10 ಹೆಕ್ಟೇರ್ |
| 1992-93 | - | ಇಲ್ಲ |
| 1993-94 | - | ಇಲ್ಲ |
| 1994-95 | - | 10 ಹೆಕ್ಟೇರ್ ಗುಂಡಿ ನೆಡುತೋಪು |
| 1995-96 | - | ಪ್ರಸಕ್ತ ಸಾಲಿನಲ್ಲಿ ಮಳೆಗಾಲದಲ್ಲಿ 15 ಹೆ.ಮಿಶ್ರ ಜಾತಿಯ ನೆಡು ತೋಪನ್ನು ಬೆಳೆಸಲು ಕ್ರಮ ಕೈಗೊಂಡಿದೆ. |

**ಹರಿಹರದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹಾಸಿಗೆಗಳನ್ನೊದಗಿಸುವ ಬಗ್ಗೆ**

157 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹರಿಹರದಲ್ಲಿರುವ ಹಾಲಿ 50 ಹಾಸಿಗೆಗಳ ಸರ್ಕಾರಿ ಆಸ್ಪತ್ರೆಯು ಅಲ್ಲಿನ ಜನತೆಗೆ ಸಾಕಾಗದೆ ತೊಂದರೆ ಅನುಭವಿಸುತ್ತಿರುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ 50 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು ಸೂಕ್ತವಲ್ಲವೇ?*

ಇ) *ಹಾಗಿದ್ದಲ್ಲಿ ಎಷ್ಟು ಸಮಯದೊಳಗೆ ಈ ಪರಿವರ್ತನೆ ಕಾರ್ಯವನ್ನು ಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗುವುದು.*

ಡಾ: ಹೆಚ್.ಕೆ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಪ್ರಶ್ನೆ ಇಲ್ಲ.

**ಜೂನಿಯರ್ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ**

158 - ಶ್ರೀ ಜೆ.ಬಿ. ಪಾಟೀಲ್ (ಬೀಳಗಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನಲ್ಲಿ ಜೂನಿಯರ್ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆಯೇ*

ಆ) *ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಜೂನಿಯರ್ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.*

ಇ) *ಬೀಳಗಿ ಮತಕ್ಷೇತ್ರ ಗೋಟೆ ಹಾಗೂ ಚಿಕ್ಕಪಡಸಲಗಿಯನ್ನು ಪ್ರಾರಂಭಿಸಲಾಗುವುದೇ?*

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) **ಖಾಸಗಿ ಜೂನಿಯರ್ ಕಾಲೇಜುಗಳು**

ರಾಜ್ಯದಲ್ಲಿ 1995-96ನೇ ಸಾಲಿಗೆ ಒಟ್ಟು ೨೫ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಇವುಗಳ ಜಿಲ್ಲಾವಾರು ವಿವರ ಕೆಳಕಂಡಂತೆ ಇರುತ್ತವೆ.

| | | | |
|---|---|---|---|
| 1. | ಬೆಂಗಳೂರು | - | 6 |
| 2. | ಕೊಡಗು | - | 1 |
| 3. | ಮಂಡ್ಯ | - | 2 |
| 4. | ಗುಲ್ಬರ್ಗಾ | - | 2 |
| 5. | ಬಳ್ಳಾರಿ | - | 1 |